**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 3613/2023 ಸಿ.ಡಬ್ಲ್ಯೂ-12 ಪಿ.ಡಬ್ಲ್ಯೂ-10

| | | |
|---|---|---|
| ಹೆಸರು | ಃ | ಲಕ್ಷ್ಮೀಪುತ್ರ |
| ತಂದೆಃಗಂಡ | ಃ | ಚೌಡಪ್ಪಾ |
| ವಯಸ್ಸು | ಃ | 41 ವರ್ಷ |
| ಉದ್ಯೋಗ | : | ಮುಖ್ಯ ಪೇದೆ |
| ವಾಸಸ್ಥಳ | ಃ | ಮಾದನ ಹಿಪ್ಪರಗಾ |

ದಿನಾಂಕಃ 13.11.2025
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ:ಸ:ಅ ಅವರಿಂದಃ**

ನಾನು 2022 ರಿಂದ 2024 ರವರೆಗೆ ಆಳಂದ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಅಂತಾ ಕಾರ್ಯ ನಿರ್ವಹಿಸಿರುತ್ತೇನೆ.

ದಿಃ 28-03-2023 ರಂದು ಚಾಸಾ 1 ರವರು ಠಾಣೆಗೆ ಹಾಜರು ಆಗಿ ದೂರನ್ನು ನೀಡಿದ್ದು, ಸದರಿ ದೂರಿನ ಮೇರೆಗೆ ಠಾಣಾ ಗುನ್ನಾ ಸಂಖ್ಯೆ 58/2023 ಅಂತಾ ಪ್ರಕರಣ ದಾಖಲಿಸಿ ಕೊಂಡು ನಮ್ಮ ಸಿಬ್ಬಂದಿ ಶಿವರಾಜರವರ ಮುಖಾಂತರ ನ್ಯಾಯಾಲಯಕ್ಕೆ ಪ್ರ.ವ.ವ.ವರದಿಯನ್ನು ಕಳುಹಿಸಿಕೊಟ್ಟು, ದಿಃ 29-03-2023 ರಂದು ಗುನ್ನಾ ಸ್ಥಳದ ಪಂಚನಾಮೆಯನ್ನು ಕೈಗೊಂಡು ಅದೇ ದಿನ ಚಾಸಾ 1 ರವರ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ 4 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ, ನಂತರ ಮುಂದಿನ ತನಿಖೆಗಾಗಿ ಚಾಸಾ 13 ರವರಿಗೆ ಕಡತವನ್ನು ನೀಡಿರುತ್ತೇನೆ.

ಸಾಕ್ಷಿಯು ನಿಪಿ. 2 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದು ಅದನ್ನು ನಿಪಿ. 2ಬಿ, ಅಂತಾ ಗುರುತಿಸಲಾಯಿತು. ಪ್ರ.ವ.ವ.ವರದಿಯನ್ನು ನೋಡಿ ಗುರುತಿಸಿದು ಅದನ್ನು ನಿಪಿ. 9, ಸಾಕ್ಷಿಯ ಸಹಿಯನ್ನು ನಿಪಿ. 9 (ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ನಿಪಿ. 1 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದು ಅದನ್ನು ನಿಪಿ. 1ಬಿ, ಅಂತಾ ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ಶ್ರೀ. ಎಸ್. ಎಸ್. ಸಿ. ವಕೀಲರಿಂದಃ**

ನ್ಯಾಯಾಲಯದಲ್ಲಿ ಇರುವ 1 ನೇ ಆರೋಪಿಯು ನಿವೃತ್ತ ಪೋಲಿಸ್ ಅಧಿಕಾರಿ ಎಂದರೆ ಸಾಕ್ಷಿಯು ಇರಬಹುದು ಅಂತಾ ನುಡಿಯುತ್ತಾರೆ. ಒಂದು ವೇಳೆ ತನಿಖೆ ಸರಿಯಾಗಿ ಮಾಡದಿದ್ದರೇ ಅದು ಅಪೂರ್ಣಗೊಳ್ಳುತ್ತದೆ ಎಂದರೆ ಸಾಕ್ಷಿಯು ನಾವು ಸರಿಯಾದ ತನಿಖೆ ಮಾಡಿದ್ದೇವೆ ಅಂತಾ ನುಡಿಯುತ್ತಾರೆ. ಸಾಮಾನ್ಯವಾಗಿ ಯಾವುದಾದರೂ ಪ್ರಕರಣದಲ್ಲಿ ತನಿಖೆ ಮಾಡುವ ಸಂದರ್ಭದಲ್ಲಿ ನಮ್ಮ ಸಿಬ್ಬಂದಿಯವರಿಗೆ ತನಿಖೆಯನ್ನು ವಹಿಸಿಕೊಟ್ಟರೆ ಅದರ ಬಗ್ಗೆ ನಮ್ಮ ಠಾಣಾ ದಿನಚರಿಯಲ್ಲಿ ನಮೂದು ಮಾಡುತ್ತೇವೆ ಎಂದರೆ ಸರಿ. ನನ್ನ ತನಿಖೆಯ ಕಾಲದಲ್ಲಿ ಆರೋಪಿತರಿಗೆ ನಾನು ಕಲಂ 41(ಎ) ಅಡಿಯಲ್ಲಿ ನೋಟಿಸು ನೀಡಿರುವುದಿಲ್ಲ. ತನಿಖಾ ಕಾಲದಲ್ಲಿ ಕಲಂ 41(ಎ) ಅಡಿಯಲ್ಲಿ ಆರೋಪಿತರಿಗೆ ನೋಟಿಸು ನೀಡುವುದು ನನ್ನ ಕರ್ತವ್ಯವಾಗಿರುತ್ತದೆ ಎಂದರೆ ಸರಿ. ನಾನು ನನ್ನ ತನಿಖಾ ಕಾಲದಲ್ಲಿ ಆರೋಪಿತರಿಗೆ ಕಲಂ 41(ಎ) ಅಡಿಯಲ್ಲಿ ನೋಟಿಸು ನೀಡದ ಕಾರಣ ನನ್ನ ತನಿಖೆ ಅಪೂರ್ಣವಾಗಿರುತ್ತದೆ ಎಂದರೆ ಸಾಕ್ಷಿಯು ನಾನು ಮುಂದಿನ ತನಿಖೆಗಾಗಿ ಕಡತವನ್ನು ದಿಃ 29-03-2023 ರಂದು ಮೇಲಾಧಿಕಾರಿಗೆ ನೀಡಿರುತ್ತೇನೆ ಅಂತಾ ನುಡಿಯುತ್ತಾರೆ. ದಿಃ 28-03-2023 ರಂದು ಮ. 2.00 ರಿಂದ ರಾ. 8.00 ಗಂಟೆಯವರೆಗೆ ನಾನು ಠಾಣಾಧಿಕಾರಿಯ ಕರ್ತವ್ಯದಲ್ಲಿ ಇದ್ದೇನು. ನಾನು ಮರು ದಿನ ಸಾಯಂಕಾಲ ಚಾಸಾ 13 ರವರಿಗೆ ಕಡತವನ್ನು ನೀಡಿರುತ್ತೇನೆ. ದಿಃ 28-03-2023 ರಂದು ನಾನು ಕರ್ತವ್ಯದಲ್ಲಿ ಇದ್ದಾಗ ನನಗೆ ಆಳಂದ ಸರ್ಕಾರಿ ಆಸ್ಪತ್ರೆಯಿಂದ ಯಾವುದೇ MLC ವರದಿ ಆಗಿರುವುದಿಲ್ಲ. ಅದೇ ದಿನ ನಾನು ಕರ್ತವ್ಯದಲ್ಲಿದ್ದಾಗ 1ನೇ ಆರೋಪಿಯವರು ಚಾಸಾ 1 ರವರಿ ವಿರುದ್ದ ದೂರನ್ನು ಸಲ್ಲಿಸಲು ಬಂದಾಗ ನಾನು ಚಾಸಾ 1 ರವರ ಮಾತುಕೇಳಿಕೊಂಡು ದೂರನ್ನು ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಮಾಡುವಾಗ ನಾನು ಯಾವುದೇ ಭಾವಚಿತ್ರಗಳನ್ನು ತೆಗೆದುಕೊಂಡಿಲ್ಲ. ಚಾಸಾ 1 ರವರ ಪುರವಣಿ ಹೇಳಿಕೆಯನ್ನು ಸಾ. 5.00 ಗಂಟೆಗೆ ತೆಗೆದುಕೊಂಡಿರುತ್ತೇನೆ. ಚಾಸಾ 4 ರಿಂದ 9 ರವರ ಹೇಳಿಕೆಗಳನ್ನು ಚಾಸಾ 1 ರವರ ಪುರವಣಿ ಹೇಳಿಕೆಯನ್ನು ಪಡೆದ ನಂತರ ಪಡೆದಿರುತ್ತೇನೆ. ಚಾಸಾ 1, 4 ರಿಂದ 9 ರವರು ಆ ಸಮಯಲ್ಲಿ ಎಲ್ಲರೂ

ಅಲ್ಲಿಯೇ ಇದ್ದರು. ಹೇಳಿಕೆಗಳು ಟೈಪ್ ಮಾಡಿದ್ದು ಇರುತ್ತವೆ ಎಂದರೆ ಸರಿ. ಅವುಗಳನ್ನು ಲ್ಯಾಪಟಾಪನಲ್ಲಿ ಟೈಪ್ ಮಾಡಿರುತ್ತೇವೆ. ಚಾಸಾ 1 ರವರ ಪುರವಣಿ ಹೇಳಿಕೆ ಮತ್ತು ಚಾಸಾ 4 ರಿಂದ 9 ರವರ ಹೇಳಿಕೆಗಳಲ್ಲಿ ಲ್ಯಾಪಟಾಪನಲ್ಲಿ ಟೈಪ್ ಮಾಡಿಸಿದ್ದು ಇರುತ್ತದೆ ಅಂತಾ ನಮೂದು ಮಾಡಿಲ್ಲ ಎಂದರೆ ಸರಿ. ಚಾಸಾ 7 ರವರು ತಮ್ಮ ಸಾಕ್ಷಿಯಲ್ಲಿ ನನ್ನ ಹೇಳಿಕೆಯನ್ನು ತೆಗೆದುಕೊಳ್ಳುವಾಗ ಅಲ್ಲಿ ಯಾರು ಇರಲಿಲ್ಲ ಅಂತಾ ನುಡಿದಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲರೂ ಅಲ್ಲಿಯೇ ಇದ್ದರು ಅಂತಾ ನುಡಿಯುತ್ತಾರೆ. ಸದರಿ ಚಾಸಾ 7 ರವರು ಅವರ ಸಾಕ್ಷಿಯಲ್ಲಿ ನನ್ನ ಹೇಳಿಕೆಯನ್ನು ಪೋಲಿಸರು ಬರೆದುಕೊಂಡಿರುತ್ತಾರೆ ಟೈಪ್ ಮಾಡಿಸಿರುವುದಿಲ್ಲ ಅಂತಾ ನುಡಿದಿರುತ್ತಾರೆ ಎಂದರೆ ಸಾಕ್ಷಿಯು ಟೈಪ್ ಮಾಡಿಸಿರುತ್ತೇವೆ ಅಂತಾ ನುಡಿಯುತ್ತಾರೆ. ಚಾಸಾ 1 ರವರ ಮಾತುಕೇಳಿಕೊಂಡು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಚಾಸಾ 4 ರಿಂದ 9 ರವರ ಸುಳ್ಳು ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತನಿಖಾ ಕಾಲದಲ್ಲಿ ಆರೋಪಿತರ ಮತ್ತು ಚಾಸಾ 1 ಮಧ್ಯೆ ನ್ಯಾಯಾಲಯದಲ್ಲಿ ಇರುವ ಪ್ರಕರಣದ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ಯಾವ ಸರ್ವೆ ನಂಬರ ಬಗ್ಗೆ ತಕರಾರು ಇರುತ್ತದೆ ಅಂತಾ ವಿಚಾರಣೆ ಮಾಡಿರುವುದಿಲ್ಲ. ಸಾಮಾನ್ಯವಾಗಿ ಯಾವುದಾದರೂ ದೂರು ಸಿವಿಲ್ ವ್ಯಾಜ್ಯಕ್ಕೆ ಮತ್ತು ಜಮೀನಿಗೆ ಸಂಬಂಧಿಸಿದಾಗ ಅದರ ಸರ್ವೆ ನಂಬರ ಬಗ್ಗೆ ವಿಚಾರಣೆ ಮಾಡಬೇಕಾಗುತ್ತದೆ ಎಂದರೆ ಸರಿ. ನಾನು ಸರ್ವೆ ನಂಬರ ತನಿಖೆ ಮಾಡಿಲ್ಲ ಎಂದರೆ ಸರಿ. ತನಿಖೆ ಮಾಡದ ಕಾರಣ ನನ್ನ ತನಿಖೆ ಅಪೂರ್ಣ ವಾಗುತ್ತದೆ ಎಂದರೆ ಸರಿಯಲ್ಲ.

ನಾನು 2022 ರಿಂದ 2024 ರವರೆಗೆ ಆಳಂದ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಅಂತಾ ಕಾರ್ಯ ನಿರ್ವಹಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 28-03-2023 ರಂದು ಚಾಸಾ 1 ರವರು ಠಾಣೆಗೆ ಹಾಜರು ಆಗಿ ದೂರನ್ನು ನೀಡಿದ್ದು, ಸದರಿ ದೂರಿನ ಮೇರೆಗೆ ಠಾಣಾ ಗುನ್ನಾ ಸಂಖ್ಯೆ 58/2023 ಅಂತಾ ಪ್ರಕರಣ ದಾಖಲಿಸಿ ಕೊಂಡು ನಮ್ಮ ಸಿಬ್ಬಂದಿ ಶಿವರಾಜರವರ ಮುಖಾಂತರ ನ್ಯಾಯಾಲಯಕ್ಕೆ ಪ್ರ.ವ.ವ.ವರದಿಯನ್ನು ಕಳುಹಿಸಿಕೊಟ್ಟು, ದಿಃ 29-03-2023 ರಂದು ಗುನ್ನಾ ಸ್ಥಳದ ಪಂಚನಾಮೆಯನ್ನು ಕೈಗೊಂಡು ಅದೇ ದಿನ ಚಾಸಾ 1 ರವರ ಪುರವಣಿ

ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಅದೇ ದಿನ ಚಾಸಾ 4 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ, ನಂತರ ಮುಂದಿನ ತನಿಖೆಗಾಗಿ ಚಾಸಾ 13 ರವರಿಗೆ ಕಡತವನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.